**ದಿನಾಂಕ: 24.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಪಿ ಎಸ್ ಎಚ್ ವಕೀಲರಿಂದ

ನಾನು 8 ನೇ ತರಗತಿಯವರೆಗೆ ಕಲಿತಿರುತ್ತೇನೆ. ದಾವಾ ಕರಾರು ಆದಾಗ ನನಗೆ 28 ವಯಸ್ಸು ಆಗಿತ್ತು. ಆಗ ಪ್ರತಿವಾದಿಗೆ 68-70 ವರ್ಷ ವಯಸ್ಸಾಗಿತ್ತು. ಪ್ರತಿವಾದಿಯು ಸೊರಬ ತಾಲೂಕಿನ ಸೂರಣಗಿ ಗ್ರಾಮದಲ್ಲಿ ವಾಸ ಇರುತ್ತಾನೆ ಎಂದರೆ ಸಾಕ್ಷಿಯು ಅಲ್ಲಿಯೂ ವಾಸವಿರುತ್ತಾನೆ ಹಾಗೂ ಹಿರೇಹುಲ್ಲಾಳ ಗ್ರಾಮದಲ್ಲಿಯೂ ವಾಸವಿರುತ್ತಾನೆ ಎನ್ನುತ್ತಾರೆ. ಸುಮಾರು 45-50 ವರ್ಷದಿಂದ ಪ್ರತಿವಾದಿ ಸೂರಣಗಿ ಗ್ರಾಮದಲ್ಲಿ ಮದುವೆಯಾಗಿ ವಾಸ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ 2 ಹೆಣ್ಣು 5 ಜನ ಗಂಡು ಮಕ್ಕಳು. ಅವರುಗಳ ಹೆಸರು ಎಂದರೆ 1. ನೀಲಮ್ಮ,2. ರತ್ನಮ್ಮ, ಗಂಡು ಮಕ್ಕಳೆಂದರೆ 1. ಹನಮಂತಪ್ಪ, 2. ರಮೇಶ, 3. ಪ್ರಧಾನಿ, 4.ರವಿ ಮತ್ತು 5.ಮಂಜು.

ಆಗಿದೆ ಅಂತಾ ಹೇಳಲಾದ ದಾವಾ ಕರಾರಿನ ಮುಂಚೆಯೇ ಎಲ್ಲಾ ಮಕ್ಕಳು ಶಾಲೆ ಕಲಿತು ಅವರವರ ಉದ್ಯೋಗದಲ್ಲಿ ತೊಡಗಿರುತ್ತಾರೆ ಎಂದರೆ ನಿಜ. 4 ನೇ ಮಗ ರವಿ ಇತನು ಬೆಂಗಳೂರಿನಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದಾನೆ ಎಂದರೆ ನಿಜ. ಉಳಿದ ಗಂಡು ಮಕ್ಕಳು ಕೂಡಾ ಒಳ್ಳೆಯ ಉದ್ಯೋಗದಲ್ಲಿ ಇದ್ದು ಅವರೆಲ್ಲರೂ ಆರ್ಥಿಕದಲ್ಲಿ ಅನೂಕೂಲಸ್ಥರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಊರು ಮತ್ತು ಹಿರೇಹುಲ್ಲಾಳ ಗ್ರಾಮದ ಮಧ್ಯ 2 ಕಿ.ಮೀ ಅಂತರ ಇದೆ. ಪ್ರತಿವಾದಿಯ ಅಣ್ಣ ತಮ್ಮಂದಿರ ಮಕ್ಕಳು ಕೂಡಾ ಹಿರೇಹುಲ್ಲಾಳ ಗ್ರಾಮದಲ್ಲಿದ್ದಾರೆ ಎಂದರೆ ನಿಜ. ಪ್ರತಿವಾದಿ ಮತ್ತು ಆತನ ಸಹೋದರರ ಮಧ್ಯ ದಾವಾ ಆಸ್ತಿಯ ಬಾಬತ್ತು ಇಲ್ಲಿಯವರೆಗೂ ಯಾವುದೇ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಪ್ರತಿವಾದಿಯ ಮಧ್ಯ ತೀರಾ ವಯಸ್ಸಿನ ಅಂತರ ಇದ್ದದ್ದರಿಂದ ನನ್ನ ಮತ್ತು ಪ್ರತಿವಾದಿಯ ಮಧ್ಯ ಯಾವುದೇ ಗೆಳೆತನ ಇರಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಅವರು ಆವಾಗಾವಾಗ ನಮ್ಮ ಮನೆ ಕೆಲಸ ಮಾಡುತ್ತಾ ಬಂದಿದ್ದು ಆ ಮೂಲಕ ನನಗೆ ಪ್ರತಿವಾದಿಯ ಪರಿಚಯ ಆಗಿದೆ ಎನ್ನುತ್ತಾರೆ. ಸಾಕ್ಷಿ ಸ್ವತಃ ಹೇಳುತ್ತಾರೆ ನನ್ನ ತಂದೆ ಕಾಲದಿಂದಲೂ ನಮ್ಮ ಮನೆ ಕೆಲಸ ಮಾಡುತ್ತಾ ಬಂದಿದ್ದು ಆ ಮೂಲಕ ನನಗೆ ಪ್ರತಿವಾದಿಯ ಪರಿಚಯ ಆಗಿದೆ ಎನ್ನುತ್ತಾರೆ.

ನನ್ನ ಊರಿನಿಂದ ಸೂರಣಗಿ ಗ್ರಾಮ ಸುಮಾರು 70 ಕಿ.ಮೀ ದೂರದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿದಿನ ಸೂರಣಗಿಯಿಂದ ನಮ್ಮ ಗ್ರಾಮಕ್ಕೆ ಬರುತ್ತಿದ್ದರಾ ಎನ್ನುವ ಪ್ರಶ್ನೆಗೆ ಸಾಕ್ಷಿ ಹಿರೇಹುಲ್ಲಾಳ ಗ್ರಾಮದಿಂದ ಬರುತ್ತಿದ್ದರು ಎನ್ನುತ್ತಾರೆ. ಸುಮಾರು 15 ವರ್ಷಗಳಿಂದ ಪ್ರತಿವಾದಿ ನಮ್ಮ ಮನೆಗೆ ಬಡಿಗತನ ಕೆಲಸ ಮಾಡಲು ಬಂದಿದ್ದರು. ಆ ಸಮಯದಲ್ಲಿ ನಾನು 10-12 ವರ್ಷ ವಯಸ್ಸಿನವನು ಇದ್ದೆ ಎಂದರೆ ಸಾಕ್ಷಿ ಸರಿಯಲ್ಲ 17-18 ವರ್ಷದವನಿದ್ದೆ ಎನ್ನುತ್ತಾರೆ. ದಾವಾ ಆಸ್ತಿ ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಹಾಗೂ ಅದರಲ್ಲಿ ಪಾಲುವಿಭಾಗ ಏನಾದರೂ ಆಗಿದೆಯಾ ಅಥವಾ ಇಲ್ಲ ಎಂಬುದು ನನಗೆ ಗೊತ್ತಿಲ್ಲ.

ಪ್ರತಿವಾದಿ ಯಾವತ್ತಿಗೂ ದಾವಾ ಆಸ್ತಿಯಲ್ಲಿ ಉಳುಮೆ ಮಾಡಿಲ್ಲ ಹಾಗೂ ದಾವಾ ಆಸ್ತಿಯನ್ನು ಆತನ ಸಹೋದರರಿಗೆ ಉಳುಮೆ ಮಾಡಲು ಕೊಟ್ಟು ಬಂದ ಆದಾಯದಲ್ಲಿ ಹಣ ಪಡೆಯುತ್ತಾ ಬಂದಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಕರಾರಿನ ದಿನಾಂಕದಿಂದ ಇಲ್ಲಿಯವರೆಗೂ ಪ್ರತಿವಾದಿಯ ಸಹೋದರರೇ ದಾವಾ ಆಸ್ತಿಯ ಉಳುಮೆ ಮಾಡುತ್ತಾ ಬಂದಿದ್ದಾರೆ. ಅದಕ್ಕೂ ಪೂರ್ವದಲ್ಲಿಯೇ ಅವರೇ ಉಳುಮೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಿಃ 01.06.2015 ರಂದು ಪ್ರತಿವಾದಿ, ಆತನ ಮಗ ಹನಮಂತಪ್ಪ ನಮ್ಮ ಊರಿನಲ್ಲಿ ನಮ್ಮ ಮನೆಗೆ ಬಂದು ಅವರಿಗೆ ಸಮಸ್ಯೆ ಇದೆ ಅಂತಾ ಹೇಳಿದ್ದು ಆದ್ದರಿಂದ ದಾವಾ ಆಸ್ತಿಯನ್ನು ಮಾರುವುದೆ ಅಂತಾ ಹೇಳಿರುತ್ತಾರೆ. ಆಗ ಮಾತುಕತೆ ಆಗಿ ದಾವಾ ಆಸ್ತಿಯನ್ನು ರೂ.5,60,000/- ಕ್ಕೆ ಖರೀದಿ ಮಾಡಲು ನಿರ್ಣಯ ಆಗಿದ್ದು, ದಿಃ 08.06.2015 ರಂದು ಸಂಚಕಾರ ರೂ.4,00,000/- ಕೊಟ್ಟಿರುತ್ತೇನೆ ಹಾಗೂ ಬಾಕಿ ಹಣ ರೂ. 5,38,000/- ಖರೀದಿ ಕಾಲಕ್ಕೆ ಕೊಡುತ್ತೇನೆ ಅಂತಾ ಮಾತುಕತೆ ಆಯಿತು. ನಮ್ಮ ಮನೆಗೆ ಬರುವ ಪೂರ್ವದಿಂದಲೇ ದಾವಾ ಆಸ್ತಿಯನ್ನು ಮಾರುವುದಿದೆ ಅಂತಾ ಹೇಳುತ್ತಾ ಬಂದಿದ್ದರು. ಮೇಲೆ ಹೇಳಿದ 4 ಲಕ್ಷ ಹಣವನ್ನು ಪ್ರತಿವಾದಿ ಮತ್ತು ಆತನ ಮಗ ಹನಮಂತಪ್ಪನಿಗೆ ಕೊಟ್ಟಿರುತ್ತೇನೆ. ನನ್ನ ತಮ್ಮ ನೌಕರಿ ಮಾಡುತ್ತಿದ್ದು ಆತನ ಬಳಿ ಸಾಲ ಮಾಡಿ ಒಂದು ಲಕ್ಷ ರೂಪಾಯಿ ತಂದೆ, ನನ್ನ ತಾಯಿ ಅವಳ ಒಡವೆಗಳನ್ನು ಒತ್ತೆ ಇಟ್ಟು ಒಂದು ಲಕ್ಷ ರೂಪಾಯಿ ತಂದಳು, ನನ್ನ ಬಳಿ

ಒಂದು ಲಕ್ಷ ರೂಪಾಯಿ ಇತ್ತು ಹಾಗೂ ಉಳಿದ ಒಂದು ಲಕ್ಷ ರೂಪಾಯಿಯನ್ನು ಬ್ಯಾಂಕಿನಲ್ಲಿ ಸಾಲ ಮಾಡಿ ತಂದಿದ್ದೇನೆ ಎನ್ನುತ್ತಾರೆ.

ನನ್ನ ತಮ್ಮ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾನೆ ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಗೊತ್ತಿಲ್ಲ. ನನ್ನ ತಾಯಿ ಸುವರ್ಣ ಬ್ಯಾಂಕಿನಲ್ಲಿ ಒಡವೆ ಅಡ ಇಟ್ಟಿದ್ದಳು. ನಾನು 8-9 ಜಮೀನುಗಳನ್ನು ಪಾಲಿನಲ್ಲಿ ಮಾಡುತ್ತಿದ್ದು ಅವುಗಳ ಆದಾಯದಿಂದ ಒಂದು ಲಕ್ಷ ರೂಪಾಯಿ ನನ್ನ ಬಳಿ ಇತ್ತು. ನಾನು ಒಂದು ಲಕ್ಷ ರೂಪಾಯಿ ಸಾಲವನ್ನು ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಮಾಡಿದ್ದೇನೆ. ಸದರಿ 4 ಲಕ್ಷ ರೂಪಾಯಿಯನ್ನು ಖಾತೆಯಿಂದ ಖಾತೆಗೆ ಅಥವಾ ಚೆಕ್ ಮೂಲಕ ಕೊಡಬಹುದಾಗಿತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇರಲಿಲ್ಲ ಎನ್ನುತ್ತಾರೆ. ಈ ದಾವೆಯಲ್ಲಿ ಕಾಣಿಸಿದಂತೆ ಯಾವುದೇ ಕರಾರು ಆಗಿಲ್ಲ, ಆದ್ದರಿಂದ 4 ಲಕ್ಷ ರೂಪಾಯಿ ಸಂಚಕಾರ ಕೊಡುವ ಪ್ರಸಂಗ ಬರುವುದಿಲ್ಲ ಹಾಗೂ ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4 ಲಕ್ಷ ರೂಪಾಯಿ ಹಣವನ್ನು ಒಬ್ಬ ಮಾಳಗಿ ವಕೀಲರ ಸಮಕ್ಷಮ ಪ್ರತಿವಾದಿ ಮತ್ತು ಆತನ ಮಗನ ಬಳಿ ಕೊಟ್ಟಿದ್ದೇನೆ. ಸದರಿ ಹಣವನ್ನು ಹಾನಗಲ್ ನಲ್ಲಿ ಕೊಟ್ಟಿದ್ದೇನೆ. ಹಣವನ್ನು ಕೊಡುವ ಮುಂಚೆ ಚಿಕ್ಕಹುಲ್ಲಾಳದಲ್ಲಿ ಮಾತುಕತೆ ಆಗಿರುತ್ತದೆ. 4 ಲಕ್ಷ ಹಣ ಎಲ್ಲಾ 500 ಮುಖಬೆಲೆಯ ನೋಟಿನಲ್ಲಿ ಕೊಟ್ಟಿದ್ದೇನೆ. 500 ಮುಖಬೆಲೆಯ ಒಟ್ಟು 800 ನೋಟುಗಳು ಇದ್ದವು. ಆ ಸಮಯದಲ್ಲಿ ದಾವಾ ಆಸ್ತಿಯ ಆರ್ ಟಿ ಸಿ ಮತ್ತು ಮ್ಯೂಟೇಶನ ಪಹಣಿಗಳನ್ನು ನೋಡಿಲ್ಲ. ದಾವಾ ಆಸ್ತಿ ಚಕಬಂದಿ ಸಹ ಗೊತ್ತಿಲ್ಲ. 4 ಲಕ್ಷ ರೂಪಾಯಿ ಹಣವನ್ನು ಕೊಟ್ಟ ನಂತರ ಪ್ರತಿವಾದಿ ಮತ್ತು ಆತನ ಮಗ ಹನಮಂತಪ್ಪ ಅವರ ಮನೆಗೆ ಹೋದರು ಹಾಗೂ ನಾನು ನಮ್ಮ ಮನೆಗೆ ಬಂದೆ.

ನಿಪಿ-2 ಸ್ಟಾಂಪ ಹಾಳೆಯನ್ನು ನಾನು ತಂದಿರುತ್ತೇನೆ ಎಂದರೆ ಸರಿಯಲ್ಲ, ಪ್ರತಿವಾದಿಯೇ ತಂದಿರುತ್ತಾರೆ ಎನ್ನುತ್ತಾರೆ. ದಿಃ 08.06.2015 ಪ್ರತಿವಾದಿಯೇ ಸ್ಟಾಂಪ ಹಾಳೆಯನ್ನು ತಂದಿರುತ್ತಾರೆ. ನಾನು ಮತ್ತು ಮಾಳಗಿ ವಕೀಲರು ಸಂಬಂಧಿಕರು ಎಂದರೆ ಸರಿಯಲ್ಲ. ಆದರೆ ನಮ್ಮ ಪಕ್ಕದ ಊರಿನವರು ಎನ್ನುತ್ತಾರೆ. ನಾನು ಮತ್ತು ಮಾಳಗಿ ವಕೀಲರು

ಆತ್ಮೀಯರಾಗಿದ್ದೇವೆ ಎಂದರೆ ಸಾಕ್ಷಿಯು ಹಾಗೆನಿಲ್ಲಾ ಅವರು ಮಾತನಾಡುತ್ತಾರೆ ನಾನು ಮಾತನಾಡುತ್ತೇನೆ ಎನ್ನುತ್ತಾರೆ.

ಸಾಕ್ಷಿಗೆ ನಿಪಿ-2,5 ಮತ್ತು ಪ್ರತಿವಾದಿಯ ವಕಾಲತ್ತನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ಪ್ರತಿವಾದಿಯ ಸಹಿಗಳಲ್ಲಿ ವ್ಯತ್ಯಾಸ ಇದೆ ಅಂತಾ ಸೂಚಿಸಿದ್ದು ಸಾಕ್ಷಿ ನನಗೆ ಅಷ್ಟೊಂದು ಓದಲು ಬರೆಯಲು ಬರುವುದಿಲ್ಲ ಆದ್ದರಿಂದ ನನಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ. ಸದರಿ ಸಹಿಗಳಲ್ಲಿ ವ್ಯತ್ಯಾಸ ಕಂಡು ಬಂದರೂ ಸಹಿತ ಅದನ್ನು ಒಪ್ಪಿಕೊಳ್ಳುವುದರಿಂದ ತಪ್ಪಿಸಿಕೊಳ್ಳಲು ನನಗೆ ಓದಲು ಬರೆಯಲು ಬರುವುದಿಲ್ಲ ಆದ್ದರಿಂದ ಹೇಳಲು ಬರುವುದಿಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರ ಸ್ಟಾಂಪ ಹಾಳೆಯನ್ನು ಮಾಳಗಿ ವಕೀಲರ ಬಳಿ ಕೊಟ್ಟಿರುತ್ತೇವೆ ಅವರೇ ಟೈಪ ಮಾಡಿರುತ್ತಾರೆ. ನಿಪಿ-2 ನ್ನು ತಯಾರು ಮಾಡುವ ಸಮಯದಲ್ಲಿ ನಾವೆಲ್ಲರೂ ನ್ಯಾಯಾಲಯದ ಆವರಣದಲ್ಲಿ ಕಾಯುತ್ತಾ ಇದ್ದೆವು. ನಿಪಿ-2 ನ್ನು ಇದೇ ರೀತಿ ಬರೆಯಬೇಕು ಅಂತಾ ನಾನು ಮಾಹಿತಿ ಕೊಟ್ಟಿಲ್ಲ.

ನಾನು, ಮಾಳಗಿ ವಕೀಲರು, ಪ್ರತಿವಾದಿ ಮತ್ತು ಆತನ ಮಗ ಹನಮಂತಪ್ಪ ಎಲ್ಲರೂ ಒಟ್ಟಿಗೆ ಕೂಡಿಯೇ ನೊಟರಿ ಮಾಡಿಸಿ ನಂತರ ನಾವು ಸಹಿ ಮಾಡಿರುತ್ತೇವೆ. ಆ ಸಮಯದಲ್ಲಿ ಪ್ರತಿವಾದಿಯ ಉಳಿದ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಹಾಜರಿದ್ದರು. ಮೊದಲು ಪ್ರತಿವಾದಿ ಸಹಿ ಮಾಡಿದರು. ನಂತರ ರತ್ನಮ್ಮ ಸಹಿ ಮಾಡಿರುತ್ತಾರೆ, ನಂತರ ಹನಮಂತಪ್ಪ, ನಂತರ ನೀಲಮ್ಮ, ನಂತರ ರಮೇಶ, ನಂತರ ಪ್ರಧಾನಿ, ನಂತರ ರವಿ, ನಂತರ ಮಂಜು ಸಹಿ ಮಾಡಿರುತ್ತಾರೆ. ನಾನು ಕೂಡಾ ಸಹಿ ಮಾಡಿರುತ್ತೇನೆ. ಆದರೆ ಪ್ರತಿವಾದಿಯ ಇಬ್ಬರು ಹೆಣ್ಣು ಮಕ್ಕಳು ಅವರ ಗಂಡಂದಿರ ಮನೆಯಲ್ಲಿ ಇದ್ದಿದ್ದು ಅಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯ ಉಳಿದ ಗಂಡು ಮಕ್ಕಳು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ಪ್ರತಿವಾದಿಯ ಉಳಿದ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಸಹಿ ಮಾಡದೇ ಇದ್ದರೂ ಕೂಡಾ ಅವರು ಸಹಿ ಮಾಡಿದ್ದರು ಅಂತಾ ನಾನು

ಹೇಳಿದ್ದು ಆದ್ದರಿಂದ ನಿಪಿ-2 ರ ದಾಖಲೆಯನ್ನು ಕೈಬರಹದ ತಜ್ಞರಿಗೆ ಕಳುಹಿಸಲು ನನ್ನದು ಯಾವುದೇ ತೊಂದರೆ ಇಲ್ಲ ಎನ್ನುತ್ತಾರೆ.

ಮಾಳಗಿ ವಕೀಲರು ಯಾವ ವಕೀಲರ ಬಳಿ ನೋಟರಿ ಮಾಡಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸುಮಾರು ದಿನಗಳಾಗಿದ್ದರಿಂದ ಸದರಿ ದಾಖಲೆಯನ್ನು ಹಾನಗಲ್ ನಲ್ಲಿಯೇ ಬರೆಸಿದ್ದು ಆದರೆ ಯಾವ ಜಾಗದಲ್ಲಿ ಎಂಬುದು ನಿಖರವಾಗಿ ನೆನಪಿಲ್ಲ. ಸರ್ವೆ ನಂ. 25 ರಲ್ಲಿ ಒಟ್ಟು 6 ಎಕರೆ 28 ಗುಂಟೆ ಜಮೀನು ಪ್ರತಿವಾದಿಯ ಒಟ್ಟು ಕುಟುಂಬದ ಜಮೀನಾಗಿದ್ದು ಅದರಲ್ಲಿ ಪಾಲು ವಿಭಾಗ ಆಗದೇ ಇದ್ದದ್ದರಿಂದ ಪ್ರತಿವಾದಿಗೆ ನಿಪಿ-2 ರಂತಹ ದಾಖಲೆಯನ್ನು ಬರೆದುಕೊಡುವ ಹಕ್ಕು ವ ಹಿತಾಸಕ್ತಿ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಇಂತಹದೇ ದಿನಾಂಕದಂದು ಬಾಕಿ ಹಣವನ್ನು ಕೊಡಬೇಕು ಅಂತಾ ಕರಾರು ಆಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಕ್ರಯಪತ್ರದ ಸಮಯದಲ್ಲಿ ಕೊಡಬೇಕು ಅಂತಾ ಕರಾರು ಆಗಿದ್ದು ಆದರೆ 2 ವರ್ಷಗಳವರೆಗೆ ಪ್ರತಿವಾದಿಯನ್ನು ಕರೆಯುತ್ತಾ ಬಂದಿದ್ದೇವೆ ಅವರು ಬರಲಿಲ್ಲ ಆದ್ದರಿಂದ ನಾವು ನೋಟಿಸು ಕೊಟ್ಟಿದ್ದೇವೆ ಎನ್ನುತ್ತಾರೆ. ನಮ್ಮ ಊರಿನ ಒಬ್ಬ ಹಿರಿಯರು, ಪ್ರತಿವಾದಿ ಊರಿನ 3 ಜನ ಹಿರಿಯರು ಒಟ್ಟಿಗೆ ಕೂಡಿಕೊಂಡು ಪ್ರತಿವಾದಿಯ ಆತನ ಹಿರೇಹುಲ್ಲಾಳ ದ ಮನೆಗೆ ಹೋಗಿ ಕೇಳಿದ್ದು ಆದರೂ ಕೇಳಲಿಲ್ಲ. ನಾನು ಕೊಟ್ಟ ನೋಟಿಸಿನಲ್ಲಿ ಏನು ಸಂಗತಿ ಕಾಣಿಸಿದ್ದೇನೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನೊಟಿಸು ಕಳುಹಿಸಿದ್ದು ಗೊತ್ತಿದೆ ಎನ್ನುತ್ತಾರೆ. ಆದರೆ ದಿನಾಂಕ 08.04.2018 ರಂದು ನೋಟಿಸು ಕಳುಹಿಸಿದ್ದೇನೆ.

ನೋಟಿಸನ್ನು ಕಳುಹಿಸುವ ದಿನಾಂಕದಂದು ನನ್ನ ಖಾತೆಯಲ್ಲಿ ಹಣ ಇರಲಿಲ್ಲ. ದಾವಾ ದಿನಾಂಕದಂದು ಕೂಡಾ ನನ್ನ ಖಾತೆಯಲ್ಲಿ ಹಣ ಇರಲಿಲ್ಲ. ನನಗೆ ಬಂದ ಆದಾಯವನ್ನು ಬ್ಯಾಂಕಿನಲ್ಲಿ ಇಡುವುದಿಲ್ಲ. ಇವತ್ತಿನ ದಿನದಂದು ಕೂಡಾ ನನ್ನ ಖಾತೆಯಲ್ಲಿ ಉಳಿತಾಯದ ಹಣ ಇಲ್ಲ. ದಾವೆಯಲ್ಲಿ ಕಾಣಿಸಿದಂತಹ ಯಾವುದೇ ಕರಾರು ಆಗಿದ್ದ ಹಾಗೂ ನಾನು ಯಾವುದೇ ಸಂಚಕಾರ ಹಣ ಕೊಟ್ಟಿಲ್ಲ ಹಾಗೂ ನಾನು ಮತ್ತು ಮಾಳಗಿ ವಕೀಲರು ಶಾಮೀಲಾಗಿ ದಾವಾ ಆಸ್ತಿಯನ್ನು ಎತ್ತಿಹಾಕು ಉದ್ದೇಶದಿಂದ ನಿಪಿ-2 ರಂತಹ ದಾಖಲಿಸಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಬ್ಯಾಂಕ ಸಾಲ ಮಾಡಿದ ಬಾಬತ್ತಿನ ದಾಖಲೆಯಾಗಲೀ, ನನ್ನ

ತಾಯಿ ಅಡ ಇಟ್ಟ ಬಗ್ಗೆ ದಾಖಲೆಯಾಗಲೀ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ನಗದಿನಲ್ಲಿ ಹಣ ಕೊಟ್ಟಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ 4 ಲಕ್ಷ ಹಣವನ್ನು ಮೇಲೆ ಹೇಳಿದಂತೆ ಹೊಂದಾಣಿಕೆ ಮಾಡಿದ್ದೇನೆ ಅಂತಾ ಈಗ ಹೇಳಿದ್ದು ಆ ವಿಚಾರವನ್ನು ನನ್ನ ದಾವೆಯಲ್ಲಾಗಲೀ ಪ್ರಮಾಣಪತ್ರದಲ್ಲಾಗಲಿ ಕಾಣಿಸಿದ್ದೇನಾ ಅಥವಾ ಇಲ್ಲವೋ ಎಂದರೆ ಸಾಕ್ಷಿಯು ನನಗೆ ಓದಲು ಬರೆಯಲು ಬರುವುದಿಲ್ಲ ಆದ್ದರಿಂದ ಆ ಬಗ್ಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ. ಆದ್ದರಿಂದ ದಾವೆಯಲ್ಲಿ ಏನೆಲ್ಲಾ ಬರೆಯಲಾಗಿದೆ ಎಂಬುದು ಗೊತ್ತಿಲ್ಲ ಎಂದರೆ ನಿಜ. ನಿಪಿ-2 ನ್ನು ನೋಟರಿ ಮಾಡಲಾಗಿದ್ದು ಆದರೆ ಸಂಬಂಧಪಟ್ಟ ನೊಟರಿ ವ್ಯಕ್ತಿಗಳು ತಮ್ಮ ರಿಜಿಸ್ಟರನಲ್ಲಿ ಎಂಟ್ರಿ ಮಾಡಿದ್ದರಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಪ್ರತಿವಾದಿಗೆ ಬೇರೆ ಯಾವ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಕೊಟ್ಟಿಲ್ಲ ಆದರೆ ಆತನಿಗೆ ಸೇರಿದ ಬೇರೆ ಜಮೀನುಗಳಿವೆ.

ನನ್ನ ಸ್ವಂತಕ್ಕೆ 3 ಎಕರೆ ಜಮೀನು ಇದೆ. ಸದರಿ ಜಮೀನಿನ ಮೇಲೆ ಗ್ರಾಮೀಣ ಬ್ಯಾಂಕಿನಲ್ಲಿ 2.5 ಲಕ್ಷ ರೂಪಾಯಿ ಸಾಲ ಮಾಡಿದ್ದೇನೆ. ಸದರಿ ಸಾಲದ ಕಂತನ್ನು ನಿಯಮಿತವಾಗಿ ಕಟ್ಟುತ್ತಾ ಬಂದಿದ್ದೇನೆ. ನನ್ನ ಜಮೀನಿನ ಮೂಲಕ ಬಂದ ಆದಾಯದ ಬಾಬತ್ತು ಮೂಲ ದಾಖಲೆ ನನ್ನ ಬಳಿ ಇರುವುದಿಲ್ಲ. ಸುಮಾರು ದಿನಗಳಿಂದ ರೈತರಿಗೆ ಲುಕ್ಸಾನು ಆಗುತ್ತಾ ಬಂದಿದ್ದು ಆದ್ದರಿಂದ ಅವರು ಯಾವುದೇ ರೀತಿಯ ಹಣ ಗಳಿಸಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಈಗ ಹೇಳಿದ ಸಾಲ ಹೊರತುಪಡಿಸಿ ಬೇರೆ ಇತರೆ ಕೈಗಡ ಸಾಲ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ರೈತಾಪಿನಾತೆ ಜಮೀನಿನ ಆದಾಯ ಹೊರತುಪಡಿಸಿ ಬೇರೆ ಆದಾಯ ಇಲ್ಲದ್ದರಿಂದ ನನ್ನ ಕುಟುಂಬದ ನಿರ್ವಹಣೆ ನನಗೆ ಕಷ್ಟವಾಗಿದ್ದು ಉಳಿತಾಯ ಮಾಡಿ ಈ ದಾವೆಯಲ್ಲಿ ಕಾಣಿಸಿದ ಹಣವನ್ನು ಕೊಡಲು ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ.

2 ರಿಂದ 4 ನೇ ಪ್ರತಿವಾದಿಗಳು ಅವರ ಪರ ವಕೀಲರು ಗೈರು ಹಾಜರು ಇದ್ದದ್ದರಿಂದ ಅವರ ಪರ ವಕೀಲರು ಸಮಾಯಾವಕಾಶ ಕೋರಿದ್ದು ಯಾವುದೇ ಸಕಾರಣ ಇಲ್ಲದ್ದರಿಂದ

ಹಾಗೂ ಕಡತ 7 ವರ್ಷದ್ದಾಗಿದ್ದರಿಂದ ಅವರ ಪ್ರಾರ್ಥನೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

(ಶ್ರೀ. ಮಹೇಶ ಎಸ್. ಪಾಟೀಲ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್